ದಿನಾಂಕಃ 13-09-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ-_ ವಾದಿ ಪರ ಶ್ರೀ ಎನ್ ಆರ್ ಬಿ ವಕೀಲರಿಂದ

ನನಗೆ ವಾದಿಯರ ಪರಿಚಯ ಇರುವದು. ಪ್ರತಿವಾದಿ 1 ವಿನ ಪರಿಚಯ ಕೂಡ ಇರುವದು. ವಾದಿಯರು ದಾವಾ ಆಸ್ತಿಗೆ ತಾವು ಮಾಲೀಕರು ಇರುವದು ಎಂದು ಹೇಳಿ ಈ ದಾವೆ ದಾಖಲು ಮಾಡಿರುವರು. ದಾವಾ ಆಸ್ತಿ ವಾದಿಯರಿಗೆ ಹಿರಿಯರಿಂದ ಬಂದಿರುವಂತಹ ಆಸ್ತಿ ಆಗಿರುವದು ಅಂದರೆ ಸರಿ. ವಾದಿ 2 ಮತ್ತು 3 ರವರ ತಂದೆಯಾದ ವಿನಾಯಕರಾವ ಇವರಿಗೆ ದತ್ತಾತ್ತೇಯ ಹಾಗೂ ಗುರುರಾವ್ ಎಂಬ ಇಬ್ಬರು ಸಹೋದರರು ಅಂದರೆ ಸರಿ. ವಾದಿಯ ತಂದೆ ಮತ್ತು ಆತನ ಇಬ್ಬರು ಸಹೋದರರ ಮಧ್ಯೆ ಹಿಸ್ಸೆಯಾಗಿರುವದು ಅಂದರೆ ಸರಿಯಲ್ಲ, ಆ ಕುಟುಂಬದ ಆಸ್ತಿಯಲ್ಲಿ ಹಿಸ್ಸೆ ಮಾಡಿಕೊಂಡ ನತಂರ ವಾದಿ 2 ಮತ್ತು 3 ರವರ ತಂದೆಯಾದ ವಿನಾಯಕರಾವ ಕುಲಕರ್ಣಿ ಇವರಿಗೆ 3 ಎಕರೆ 13 ಗುಂಟೆ ಜಮೀನು ಬಂದಿರುವದು ಅಂದರೆ ಸರಿಯಲ್ಲ. ಈ ದಾವಾ ಆಸ್ತಿಯಲ್ಲಿ ವಾದಿ 2 ಮತ್ತು 3 ರವರ ಚಿಕ್ಕಪ್ಪನಾದ ದತ್ತಾತ್ತೇಯ ಇವರಿಗೆ 26 ಗುಂಟೆ ಹಾಗೂ ಗುರುರಾವ ಕುಲಕರ್ಣಿ ಇವರಿಗೆ 27 ಗುಂಟೆಯ ಜಮೀನು ಬಂದಿರುವದು ಅಂದರೆ ಸರಿಯಲ್ಲ.ಈ ರೀತಿಯಾಗಿ ಪಾಲು ಮಾಡಿಕೊಂಡ ಬಗ್ಗೆ ನಿಪಿ 1 ದಾಖಲಾತಿಯಲ್ಲಿ ನಮೂದು ಮಾಡಿರುವರು ಅಂದರೆ ಸರಿಯಲ್ಲ. ಅದು ಇತ್ತಿಚೆಗೆ ಮಾಡಿಕೊಂಡಿರುವಂತಹ ದಾಖಲಾತಿ ಎಂದು ಸಾಕ್ಷಿ ಉತ್ತರಿಸುವರು. ದಾವಾ ಆಸ್ತಿಯಲ್ಲಿಯ ಪ್ಲಾಟುಗಳನ್ನು ನಾವು ಖರೀದಿ ಮಾಡಿದ ನತಂರ ಆ ದಾಖಲಾತಿಯನ್ನು ಮಾಡಿಕೊಂಡಿರುವರು. ನಿಪಿ 1 ದಾಖಲಾತಿಯು 1993-94 ನೇ ಸಾಲಿನಲ್ಲಿ ಮಾಡಿಕೊಂಡಿರುವಂತಹ ದಾಖಲಾತಿಯಾಗಿರುವದು ಅಂದರೆ ಸರಿಯಲ್ಲ. ನಾವು ದಾವಾ ಆಸ್ತಿಯಲ್ಲಿನ ಪ್ಲಾಟನ್ನು ಖರೀದಿ ಮಾಡಿ ಈಗ ಸುಮಾರು 12 ವರ್ಷಗಳು ಆಗಿರುವವು . ಅದರೆ ನಿದಿರ್ಷ್ಟವಾಗಿ ಯಾವ ವರ್ಷ ಮತ್ತು ದಿನಾಂಕ, ತಿಂಗಳು ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ನಾನು ಖರೀದಿ ಮಾಡಿರತಕ್ಕಂತಹ ಖರೀದಿ ಪತ್ರದ ನಿಪಿ 10 ರಲ್ಲಿ ಸರ್ವೆ ನಂ. 164 ರ ಜಮೀನಿನಲ್ಲಿ ಭಾಗವನ್ನು ಖರೀದಿ ಹಿಡಿದಿರುವ ಬಗ್ಗೆ ಅದರಲ್ಲಿ ಬರೆಸಿರುವುದಿಲ್ಲ ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ನಾನು ಸರ್ವೆ ನಂಬರಿನ ಆಸ್ತಿ

ಯಲ್ಲಿ ಖರೀದಿಸಿರುವೆನು. ಈ ಬಗ್ಗೆ ದಾಖಾಲಾತಿಯನ್ನು ನಾನು ಹಾಜರಪಡಿಸಿರುವೆನು. ನಿದಿರ್ಷ್ಟವಾಗಿ ಯಾವ ದಾಖಲಾತಿಯನ್ನು ಸರ್ವೆ ನಂ. 164 ರ ಆಸ್ತಿಯಲ್ಲಿನ ಆಸ್ತಿಯನ್ನು ಖರೀದಿ ಮಾಡಿರುವ ಬಗ್ಗೆ ನನ್ನ ಖರೀದಿ ಪತ್ರ ವನ್ನು ಹಾಜರಪಡಿಸಿರುವೆನು. ದಾವಾ ಆಸ್ತಿಯ 5 ಎಕರೆಯ ಜಮೀನಿನಲ್ಲಿ ಬಿನ್ ಶೇತ್ಕಿ 2 ಗುಂಟೆ ಜಮೀನನ್ನು ನಾನು ಖರೀದಿ ಮಾಡಿರುವೆನು. ಬಿನ್ನ ಶೇತ್ಕಿಯ ಆಸ್ತಿಯನ್ನು ಖರೀದಿ ಮಾಡಿದ ನತಂರ ಆ ಆಸ್ತಿಯ ಮೂಲ ಮಾಲೀಕರ ಹೆಸರನ್ನು ರೌಂಡ್ ಹಾಕಿ ನಮ್ಮ ಹೆಸರನ್ನು ದಾಖಲು ಮಾಡುತ್ತಾರೆ ಅಂದರೆ ಸಾಕ್ಷಿ ನುಡಿಯುವುದೆನೆಂದರೆ ಆ ಆಸ್ತಿಗೆ 3 ಜನರ ಹೆಸರು ಮಾಲೀಕರು ಅಂತಾ ಇರುವದು ಅಂತಾ ಸಾಕ್ಷಿ ಉತ್ತರಿಸುತ್ತಾರೆ. ಸರ್ವೆ ನಂ.164 ರ ಜಮೀನಿನಲ್ಲಿ ಪ್ಲಾಟ ನಂ. 28 ಈಗಲೂ ಸಹ ಅದು ಮೂಲ ಮಾಲೀಕರ ಹೆಸರಿನಲ್ಲಿ ಇರುವದು ಅಂದರೆ ಸಾಕ್ಷಿ ಉತ್ತರಿಸುವದು ಅಂದರೆ ಅವರು ನಮಗೆ ಪ್ಲಾಟನ್ನು ಖರೀದಿ ಕೊಟ್ಟಿರುವುದಾಗಿ ಎಂದು ಉತ್ತರಿಸುವರು. ಈ ಮಾಲೀಕರ ಹೆಸರು ಯಾವ ಕಾರಣಕ್ಕಾಗಿ ಕಡಿಮೆ ಮಾಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಉತ್ತರಿಸುವದು ಅಂದರೆ ಉಪನೊಂದಣಿ ಕಚೇರಿಯಲ್ಲಿ ಖರೀದಿ ಪತ್ರ ಬರೆದುಕೊಟ್ಟಿರುವರು ಆ ಮೂಲ ಮಾಲೀಕರ ಹೆಸರು ಯಾಕೆ ಕಡಿಮೆ ಮಾಡಿರುವುದಿಲ್ಲ ಎಂದು ಹೇಳಲು ಆಗುವುದಿಲ್ಲ ತಾನೂ ಅನಕ್ಷರಸ್ತಳು ಆಗಿದ್ದರಿಂದ.ನಾನು ಖರೀದಿ ಮಾಡಿರುವಂತಹ ಆಸ್ತಿಯು ಅದಕ್ಕೆ ಸಂಬಂಧಪಟ್ಟಂತೆ ಮೂಲ ಮಾಲೀಕರ ಹೆಸರು ಪಂಚಾಯತಿಯ ದಾಖಲಾತಿಯಲ್ಲಿ ಇದ್ದ ಬಗ್ಗೆ ದಾಖಲಾತಿಯನ್ನು ಹಾಜರಪಡಿಸಿರುವುದಿಲ್ಲ. ಆದರೆ ನನ್ನ ಪಂಚಾಯತಿಯ ದಾಖಲೆಗಳನ್ನು ಹಾಜರಪಡಿಸಿರುವೆನು. ನಾನು ಖರೀದಿ ಮಾಡಿರತಕ್ಕಂತಹ ಆಸ್ತಿಗೆ ಸಂಬಂಧಪಟ್ಟಂತೆ ಮೂಲ ಮಾಲೀಕರ ಹೆಸರಿನಲ್ಲಿ ಪಂಚಾಯತಿಯಲ್ಲಿ ಯಾವುದೆ ದಾಖಲಾತಿಗಳು ಇರುವುದಿಲ್ಲ ಅಂದರೆ ಸಾಕ್ಷಿ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ನಾನು ಖರೀದಿ ಮಾಡಿರುವ ಸಮಯದಲ್ಲಿ ವಾದಿ 2 ಮತ್ತು 3 ವಿನ ತಂದೆ ಹಾಗೂ ಆತನ ಇಬ್ಬರು ಸಹೋದರರು ಕೂಡಿಕೊಂಡೆ ನನಗೆ ಪ್ಲಾಟನ್ನು ಮಾರಾಟ ಮಾಡಿರುವರು. ವಿನಾಯಕರಾವ ಕುಲಕರ್ಣಿ , ದತ್ತಾತ್ರೇಯ ಕುಲಕರ್ಣಿ ಹಾಗೂ ಗುರುರಾವ ಕುಲಕರ್ಣಿ ಪಂಚಾಯತಿಯ ಉತಾರವು ದಾವಾ ಆಸ್ತಿಯ ಇದ್ದ ಬಗ್ಗೆ ಎಷ್ಟನೆ ವರ್ಷದಲ್ಲಿ ನಿಮಗೆ ಗೊತ್ತಾಗಿರುವದು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಪ್ಲಾಟ ನಂ. 28 ನ್ನು ಖರೀದಿ ಹಿಡಿಯುವ ಸಮಯದಲ್ಲಿ ವಾದಿ 2 , 3 ಮತ್ತು ಪ್ರತಿವಾದಿ 1

ರವರು ವಯಸ್ಸಿಗೆ ಬಂದಿರುವರು ಅಂದರೆ ಅವರು ಸಣ್ಣವರಿದ್ದರು ಎಂದು ಸಾಕ್ಷಿ ಉತ್ತರಿಸುವರು. ನನ್ನ ಖರೀದಿ ಪತ್ರದ ಮೇಲೆ ವಾದಿ 1 ರಿಂದ 3 ಹಾಗೂ 1 ನೇ ಪ್ರತಿವಾದಿಯ ಸಹಿಗಳನ್ನು ಪಡೆದುಕೊಳ್ಳಲು ಯಾವುದೆ ತೊಂದರೆ ಇರಲ್ಲಿಲ್ಲ ಅಂದರೆ ಸಾಕ್ಷಿ ಉತ್ತರಿಸುವದು ಏನೆಂದರೆ ಆ ಸಮಯದಲ್ಲಿ ಅವರ ಸಹಿಗಳು ಬೇಡ ಅಂತಾ ವಿನಾಯಕರವರ , ದತ್ತಾತ್ತೇಯ ಮತ್ತು ಗುರುರಾಜ ಕುಲಕರ್ಣಿ ಹೇಳಿರುವರು. ಈ ಸಗಂತಿಯನ್ನು ನನ್ನ ಖರೀದ ಪತ್ರದಲ್ಲಿ ಬರೆಸಿರುವುದಿಲ್ಲ ವಾದಿ 2 , 3 ಹಾಗೂ 1 ನೇ ಪ್ರತಿವಾದಿಯು ಖರೀದಿ ಪತ್ರ ಬರೆಸಿಕೊಳ್ಳುವ ಸಮಯದಲ್ಲಿ ಪಾಪ್ತ ವಯಸ್ಕರಾಗಿದ್ದರೂ ಸಹಿತ ನನ್ನ ಅನೂಕೂಲಕ್ಕೆ ತಕ್ಕ ಹಾಗೆ ನಾನು ಅವರ ವಯಸ್ಕರು ಆಗಿರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆಸ ರಿಯಲ್ಲ. 2007 ನೇ ಸಾಲಿನಲ್ಲಿ ವಾದಿ 3 ರವರು ಬಿ ಎಸ್ ಎನ್ ಎಲ್ ನೌಕರಿ ಮಾಡುತ್ತಿದ್ದರೂ ಅಂದರೆ ನನಗೆ ಮಾಹಿ ತಿ ಇರಲಿಲ್ಲ ಎಂದು ಸಾಕ್ಷಿ ಉತರಿಸುವರು. 2007 ನೇ ಸಾಲಿನಲ್ಲಿ ವಿನಾಯಕರವರ , ದತ್ತಾತ್ತೇಯ ಮತ್ತು ಗುರುರಾಜ ರಾವ ಕುಲಕರ್ಣಿ ಇವರಿಗೆ ಯಾವುದೇ ಹಣಕಾಸಿನ ಅಡಚಣೆ ಇರಲಿಲ್ಲ ಅಂದರೆ ಸರಿಯಲ್ಲ. ಅವರಿಗೇ ಹಣಕಾಸಿನ ಅಡಚಣೆ ಇರುವುದಿಂದಲೇ ಪ್ಲಾಟನ್ನು ಮಾರಾಟ ಮಾಡಿರುವರು ಅಂತಾ ಸಾಕ್ಷಿ ಉತ್ತರಿಸುವರು. ಅವರಿಗೆ ಯಾವುದೇ ಹಣದ ಅಡಚಣೆ ಇರದೇ ಇದ್ದರೂ ಸಹಿತ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿ ಯರ ಕುಟುಂಬದ ಉಳಿದ ಬೇರೆ ಆಸ್ತಿಗಳನ್ನು ದಾವಾ ಆಸ್ತಿಯನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದು ಲಿಖಿತ ಪತ್ರದಲ್ಲಿ ಹೇಳಿದ್ದು ಆ ಆಸ್ತಿಗಳ ನಬಂರುಗಳು ನನಗೆ ಹೇಳಲು ಆಗುವುದಿಲ್ಲ ಮತ್ತು ಅವುಗಳ ನಂಬರಗಳನ್ನು ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪತ್ರದಲ್ಲಿ ಹೇಳಿರುವುದಿಲ್ಲ ಅಂದರೆ ಸರಿ ನಾವು ಹಣವನ್ನು ನೀಡಿ ಆಸ್ತಿಯನ್ನು ಖರೀದಿ ಮಾಡಿದ ವಿಷಯ ವಾದಿಯರಿಗೆ ಗೊತ್ತಿದ್ದರೂ ಸಹಿತ ಈ ತಪ್ಪು ಕಲ್ಪನೆಯಿಂದ ಈ ದಾವೆ ದಾಖಲು ಮಾಡಿರುವರು. ದಾವಾ ಆಸ್ತಿಯಲ್ಲಿ ವಾದಿಯರಿಗೆ ಹಿಸ್ಸೆ ಇರುವುದರಿಂದ ನಾವು ಮಾಡಿಕೊಂಡಿರುವ ಖರೀದಿ ವ್ಯವಹಾರವು ವಾದಿಯರಿಗೆ ಬಂಧನಕಾರಿ ಆಗುವುದಿಲ್ಲ ಅಂದರೆ ಸರಿಯಲ್ಲ.ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ನನ್ನ ಪ್ರಕರಣಕ್ಕೆ ಅನುಕೂಲ ಆಗುವ ಸಲುವಾಗಿ ಸುಳ್ಳು ಹೇಳಿ ಬರೆಸಿದ್ದೇನೆ ಅಂದರೆ ಸ ರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳ ಸವಣೂರ).